ಈಗ ಪ್ರಶ್ನೆ ಏನು ಬರುತ್ತದೆ ಎಂದರೆ, ಅವರ ಅವಧಿ ಏನಾಗಿದೆ, 11 ತಿಂಗಳ ಅವಧಿ ಇದು ಅವರಿಗೆ ಊರ್ಜಿತಗೊಳ್ಳುತ್ತದೆಯೋ, ಅಥವಾ ಅದು 11 ತಿಂಗಳು ಲ್ಯಾಪ್ಸ್ ಆಗಿದೆಯೋ ಎನ್ನತಕ್ಕದ್ದು ಬರುತ್ತದೆ. ಆ ದೃಷ್ಟಿಯಿಂದ ಕಾನೂನು ಇಲಾಖೆಯ ಸಲಹೆಯನ್ನು ಕೇಳಿದ್ದೇವೆ.

ಅಧ್ಯಕ್ಷರು:- ಮಾನ್ಯ ಡಿ.ಆರ್. ಪಾಟೀಲರು ಏನು ಹೇಳುತ್ತಾರೆ ಎಂದರೆ, ಅವರ ಕಂಟೆನ್‌ಷನ್ ಇಷ್ಟೆ. ನೀವು ಎಲೆಕ್ಷನ್ ಮಾಡಿ - to the office of the President and Vice-President. ಅಮೇಲೆ you get this matter examined in detail by the Law Department. If need be, you approach the Court.

ಅಗ್ರೀವ್ಡ್ ಪಾರ್ಟೀಸ್ ಯಾರು ಇರುತ್ತಾರೆ, ಅವರೂ ಕೋರ್ಟಿಗೆ ಹೋಗಲಿ. to settle this particular issue ನೀವು ಹೇಳಿದ್ದು. whether from the date of Notification, tennur/count ಆಗಬೇಕಾ ಅಥವಾ from the date of assuming office ಎನ್ನುವುದು ಅಮೇಲೆ ಇತ್ಯರ್ಥವಾಗಲಿ. ಈಗ ಎಲೆಕ್ಷನ್ ಆಗುವುದು ಆಗಿ ಹೋಗಲಿ ಅಂತ ಅವರು ಹೇಳುವುದು. ಇದರಲ್ಲಿ ಏನೂ ಪ್ರತಿಷ್ಠೆಯ ವಿಚಾರ ಇಲ್ಲ. It will be fail enough. It is a very reasonable demand.

ಶ್ರೀ ಹೆಚ್. ನಾಗಪ್ಪ:- ಪ್ರತಿಷ್ಠೆ ವಿಚಾರ ಇಲ್ಲ. ಇದನ್ನು ಮಾಡುತ್ತೇವೆ. ಹೈಕೋರ್ಟ್ ಡೈರೆಕ್ಷನ್ ಏನಿದೆ, ಅದನ್ನು ಪಾಲಿಸುತ್ತೇವೆ.

ಅಧ್ಯಕ್ಷರು:- ವೆರಿಗುಡ್.

**ಮಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳ ದರ**

54 (210) ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳಿಗೆ ಕನಿಷ್ಟ ದರವನ್ನು ಯಾವ ಆಧಾರದಲ್ಲಿ ನಿಗದಿಪಡಿಸಲಾಗಿದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯ ಸಾರಿಗೆ ಸಂಸ್ಥೆಯವರು ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರ ವಸೂಲು ಮಾಡುವ ಬಗ್ಗೆ ದೂರುಗಳು ಬಂದಿವೆಯೇ? ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್‌ಟಿಡಿ 91 ಟಿಎಂಎ 96, ದಿನಾಂಕ:14-11-1996 ರನ್ವಯ ಮಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗೀ ಬಸ್ಸುಗಳ ಕನಿಷ್ಟ ದರವನ್ನು ನಿಗದಿಪಡಿಸಲಾಗಿದೆ.

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ (ಶ್ರೀ ಕುಂಭೈ ಸುಂದರರಾವ್ ರವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿನ ದರದಲ್ಲಿ ವ್ಯತ್ಯಾಸಗಳು ಏಕೆ ಇವೆ ಎಂದು ಕೇಳಿದ್ದಕ್ಕೆ ಇಂತಿಂಥ ಆದೇಶಗಳ ಪ್ರಕಾರ ಮಾಡಿದ್ದೇವೆ ಎಂದು ಸರ್ಕಾರದವರು, ಉತ್ತರ ಕೊಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ನಿಮ್ಮ ಆದೇಶದ ಪ್ರಕಾರ ಯಾವ ಮಾನ ದಂಡದಲ್ಲಿ ಈ ದರವನ್ನು ನಿಗದಿ ಮಾಡಿದ್ದೀರಿ? ಏಕೆಂದರೆ ಟೈರ್ಸ್‌ಗೆ, ಡೀಸಲ್‌ಗೆ, ಪೆಟ್ರೋಲ್‌ಗೆ, ಅಥವಾ ಸ್ಪೇರ್‌ಪಾರ್ಟ್ಸ್‌ಗೆ, ಸರ್ಕಾರಿ ಬಸ್ಸುಗಳಿಗೆ ಮತ್ತು ಖಾಸಗಿ ಬಸ್ಸುಗಳಿಗೆ ದರ ಎಲ್ಲವೂ ಒಂದೇ. ಟ್ಯಾಕ್ಸ್ ಕೂಡ ಒಂದೇ. ಆದರಲ್ಲಿ ವ್ಯತ್ಯಾಸ ಏನೂ ಇರುವುದಿಲ್ಲ. ಆದ್ದರಿಂದ ಖಾಸಗಿ ಬಸ್ಸುಗಳ ರೇಟು ಮತ್ತು ಸರ್ಕಾರಿ ಬಸ್ಸುಗಳ ದರದಲ್ಲಿ ವ್ಯತ್ಯಾಸಗಳು ಏತಕ್ಕೆ ಇದೆ? ಈಗ ಮಂಗಳೂರಿನಿಂದ ಬೆಂಗಳೂರಿಗೆ ಬರುವ ಖಾಸಗಿ ಬಸ್ಸಿನ ರೇಟಿಗೂ, ಕೆಎಸ್‌ಆರ್‌ಟಿಸಿ ಬಸ್ಸಿನ ರೇಟಿಗೂ ವ್ಯತ್ಯಾಸ ಉಂಟು. ಇದು ಏತಕ್ಕೆ ವ್ಯತ್ಯಾಸ ಮತ್ತು ಯಾವ ಮಾನದಂಡದಲ್ಲಿ ಇದನ್ನು ನೀವು ಮಾಡುತ್ತಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಸರ್ಕಾರದಿಂದ ಈ ಬಸ್ಸುಗಳ ದರವನ್ನೂ ಡೀಸೆಲ್ ಬೆಲೆ ಜಾಸ್ತಿಯಾದಂಥ ಸಂದರ್ಭದಲ್ಲಿ, ಟೈರ್ ಬೆಲೆ ಜಾಸ್ತಿಯಾದಂಥ ಸಂದರ್ಭದಲ್ಲಿ ಮಾಡಿದ್ದೇವೆ.

ಅಧ್ಯಕ್ಷರು:- ಅವರ ಮುಖ್ಯ ಪ್ರಶ್ನೆ ಏನು? ಖಾಸಗಿ ಬಸ್ಸುಗಳಿಗೂ ಕೆಎಸ್‌ಆರ್‌ಟಿಸಿ ಬಸ್ಸಿನಂತೆ ಕೊಡಬೇಕು ಅಂತಲಾ? ಖಾಸಗಿಯವರು ಜಾಸ್ತಿ ಮಾಡಬೇಕು ಅಂತಲಾ? ನಾನು ನೇರರಾಗಿ ನಿಮ್ಮನ್ನು ಕೇಳುತ್ತಿದ್ದೇನೆ, ಖಾಸಗಿಯವರಿಗೂ ಹೆಚ್ಚಿಗೆ ಚಾರ್ಜ್ ಮಾಡುವುದಕ್ಕೆ ಅವಕಾಶ ಕೊಡಬೇಕು ಅಂತಲಾ ನೀವು ಹೇಳುತ್ತಿರುವುದು?

ಶ್ರೀ ಕೆ. ಜಯರಾಮಶೆಟ್ಟಿ:- ಖಾಸಗಿಯವರು ಕಡಿಮೆ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಜಯರಾಮ್‌ರವರೇ, ನಿಮ್ಮ ಪ್ರಶ್ನೆ ಏನು?

ಶ್ರೀ ಯು.ಆರ್. ಸಭಾಪತಿ:- ಖಾಸಗಿ ಬಸ್ಸಿನವರು ಕಡಿಮೆ ದರದಲ್ಲಿ ಸಂಚಾರ ಮಾಡುತ್ತಿದ್ದಾರೆ. ಕೆಎಸ್‌ಆರ್‌ಟಿಸಿ ಯವರೂ ಕೂಡ ಅದೇ ದರದಲ್ಲಿ ಸಂಚಾರ ಮಾಡಬೇಕು ಎಂದು ಅವರು ಕೇಳುತ್ತಿರುವುದು;

ಶ್ರೀ ಕೆ. ಜಯರಾಮಶೆಟ್ಟಿ:- ಅಧ್ಯಕ್ಷರೇ, ನಮ್ಮಲ್ಲಿ ಏನಾಗಿದೆ ಎಂದರೆ, ಖಾಸಗಿ ಬಸ್ಸಿನಲ್ಲಿ ದರ ಕಡಿಮೆ ಇದೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ದರ ಜಾಸ್ತಿ ಇದೆ. ಅದಕ್ಕೆ ನಮ್ಮ ಬೇಡಿಕೆ ಏನು ಎಂದು ಹೇಳಿದರೆ, ಖಾಸಗಿ ಬಸ್ಸುಗಳನ್ನು ಯಾವ ರೀತಿ ಕಡಿಮೆ ದರದಲ್ಲಿ ಓಡಿಸುತ್ತಿದ್ದಾರೋ, ಕೆ.ಎಸ್.ಆರ್.ಟಿ.ಸಿ. ಬಸ್ಸಿನವರು ಕೂಡ ದರ ಸ್ವಲ್ಪ ಕಡಿಮೆ ಮಾಡಿದರೆ ಒಳ್ಳೆಯದು ಎಂದು ಹೇಳುವುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು:- ಸರಿ. ನಾನು ಖಾಸಗಿಯವರೂ ಏರಿಸಬೇಕು ಎಂದು ಹೇಳಿದರೇನೋ ಎಂದು ತಿಳಿದುಕೊಂಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರುಗಳು ಏನು ಹೇಳುತ್ತಿದ್ದಾರೆ ಇದು ಸರಿಯಲ್ಲ. ಕೆಲವು ಕಡೆಗಳಲ್ಲಿ, ಕೆಲವು ರೂಟುಗಳಲ್ಲಿ, ಕೆಲವು ಸೀಸನ್‌ಗಳಲ್ಲಿ ಖಾಸಗಿಯವರಿಗೆ ನಾವು ಮಿನಿಮಮ್ ಅಂಡ್ ಮ್ಯಾಕ್ಸಿಮಮ್ ಎಂದು ಹೇಳಿಬಿಟ್ಟು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಿಂದ, ಟ್ರಾನ್ಸ್‌ಪೋರ್ಟ್ ಡಿಪಾರ್ಟಮೆಂಟ್‌ನಿಂದ ರೇಟ್‌ನ್ನು ಸರ್ಕಾರದಿಂದ ಫಿಕ್ಸ್ ಮಾಡಿರುತ್ತೇವೆ. ಇಷ್ಟು ಮಿನಿಮಮ್, ಇದಕ್ಕಿಂತ ಹೆಚ್ಚು ನೀವು ಹೋಗಬಾರದು ಎಂದು ಹೇಳಿರುತ್ತೇವೆ. ಹೀಗಾಗಿ ಸ್ವಲ್ಪ ವೇರಿಯೇಷನ್ಸ್ ಇದ್ದೇ ಇರುತ್ತದೆ. ಅದು ಏನೂ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ:- ಅಧ್ಯಕ್ಷರೇ, ಈಗ ಉಡುಪಿಯಿಂದ ಮಂಗಳೂರಿಗೆ ಹೋಗುವಂಥ ಬೇಕಾದಷ್ಟು ಖಾಸಗಿ ಬಸ್ಸುಗಳು ಇವೆ. ಹಾಗೆಯೇ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳೂ ಇವೆ. ಖಾಸಗಿ ಬಸ್ಸಿಗೂ ಕೆ.ಎಸ್.ಆರ್.ಟಿ.ಸಿ. ಬಸ್ಸಿಗೂ ಉಡುಪಿಯಿಂದ ಮಂಗಳೂರಿಗೆ ಹೋಗುವ ಬಸ್ಸುಗಳಲ್ಲಿ ಮೂರು-ನಾಲ್ಕು ರೂಪಾಯಿಗಳ ವ್ಯತ್ಯಾಸ ಇದೆ.

ಅಧ್ಯಕ್ಷರು:- ನಿಮಗೆ ಗೊತ್ತಿದೆ. ಕಾರಣಗಳು ಹಲವಾರು ಇವೆ. ಗುಲ್ಬರ್ಗಾದಿಂದ ಯಾದ್ಗೀರ್‌ರೆಗೆ ಉಡುಪಿ ಬಸ್ಸು ಹೋಗುವುದಿಲ್ಲ. ಹೌದೇ? ಆಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಬಸ್ಸುಗಳನ್ನು ಓಡಿಸಬೇಕು. ಅವರಿಗೆ ಜವಾಬ್ದಾರಿ ಇದೆ. That is a Public Undertaking ಅವರು ಸಂಬಳಕೊಟ್ಟಷ್ಟು ಇವರ ಕೊಡುವುದಿಲ್ಲ. ಅಮೇಲೆ ಕೆಟ್ಟುಹೋದರೂ, ಆಕ್ಸಿಡೆಂಟ್ ಆದರೂ, ಎಂಪ್ಲಾಯೀಸ್‌ಗೆ ತೊಂದರೆಯಾದರೂ ಅವರು ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ. ಖಾಸಗಿಯವರು ಕೊಟ್ಟರೂ ನಡೆಯುತ್ತದೆ, ಕೊಡದಿದ್ದರೂ ನಡೆಯುತ್ತದೆ. ಓವರ್‌ಹೆಡ್ ಚಾರ್ಜಸ್ ಇಲ್ಲಿ ಜಾಸ್ತಿ ಬರುತ್ತದೆ. ಒಂದು ಅಂಡರ್‌ಟೇಕಿಂಗ್‌ನಿಂದ ನಡೆಸುವುದಕ್ಕೂ, ಅದಕ್ಕೂ ವ್ಯತ್ಯಾಸ ಆಗುತ್ತದೆ. ಅವರು ಅಲ್ಲಲ್ಲಿಯೇ ಓಡಿಸಿಕೊಳ್ಳುವುದು ತಾನೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ವ್ಯತ್ಯಾಸ ಇರುವುದು ಕೆಲವು ಕಡೆಗಳಲ್ಲಿ ಮಾತ್ರ. ನಾವು ವೆರಿಫೈ ಮಾಡಿದಾಗ ಬಹುತೇಕ ಕಡೆಗಳಲ್ಲಿ ಖಾಸಗಿ ಬಸ್ಸುಗಳ ರೇಟೇ ಕೆ.ಎಸ್.ಆರ್.ಟಿ.ಸಿ. ಬಸ್ಸು ರೇಟುಗಳಿಗಿಂತ ಜಾಸ್ತಿ ಇದೆ.

**1996-97ನೇ ಸಾಲಿನ ಆಶ್ರಯ ಯೋಜನೆಯ ಮನೆಗಳು**

55(121) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿಗೆ ಆಶ್ರಯ ಯೋಜನೆಯಡಿಯಲ್ಲಿ ಜಿಲ್ಲಾವಾರು ನಿಗದಿ ಮಾಡಿದ ಮನೆಗಳ ಸಂಖ್ಯೆ ಎಷ್ಟು; ಅದಕ್ಕೆ ಬೇಕಾದ ಹಣ ಎಷ್ಟು?

ಆ) 31-1-98ರವರೆಗೆ ಜಿಲ್ಲಾವಾರು ಬಿಡುಗಡೆ ಮಾಡಿದ ಹಣ ಎಷ್ಟು; ಖರ್ಚಾದ ಹಣ ಎಷ್ಟು?